ಜಾಣರ ಪೆಟ್ಟಿಗೆ

## ಚಂದದ ಸಿನಿ ಕ್ವಿಜ್

ಚಂದನ ವಾಹಿನಿಯ ಜನಪ್ರಿಯ ಕಾರ್ಯಕ್ರಮಗಳ ಪಟ್ಟಿಗೆ 'ಸಿನಿ ಕ್ವಿಜ್' ಕೂಡ ಸೇರಿಕೊಂಡಿದೆ. ಕಾರ್ಯಕ್ರಮ ಚೆನ್ನಾಗಿದ್ದು, ಒಳ್ಳೆಯ ಮನರಂಜನೆ ನೀಡುತ್ತಿರುವುದು ಶ್ಲಾಘನೀಯ. ನಿರೂಪಕಿ ಜಾಹ್ನವಿ ಸಿನಿಮಾಗಳಿಗೆ ಸಂಬಂಧಿಸಿದ ಈ ಕಾರ್ಯಕ್ರಮದಲ್ಲಿ ಕುತೂಹಲದ ಪ್ರಶ್ನೆಗಳನ್ನು ಕೇಳಿ ರಂಜಿಸಿದರು. ಒಂದು ಗಂಟೆ ಅವಧಿಯ ಈ ಸಂಚಿಕೆ ಕನ್ನಡ ಸಿನಿಮಾಗಳಿಗೆ ಮೀಸಲಾಗಿರುವುದು ಸಂತೋಷದ ವಿಷಯ. ಆಡಂಬರ, ವ್ಯಂಗ್ಯದ ಮಾತುಗಳಿಲ್ಲದೆ ಕಾರ್ಯಕ್ರಮ ನಡೆಸಿಕೊಟ್ಟರು. ಯಾವ ದಿನ ಪ್ರಸಾರ ಆಗುತ್ತದೆ ಎನ್ನುವ ಮಾಹಿತಿ ಮಾತ್ರ ಗೊತ್ತಾಗಲಿಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಕನ್ನಡ ಕವಿತೆಗೆ ವಿಕೃತ ರೂಪ

ವಾರದ ಪತ್ರ

ಝೀ ಕನ್ನಡದ 'ಅಮೃತಧಾರೆ'ಯಲ್ಲಿ ಆನಂದ ಪಾತ್ರಧಾರಿ ತನ್ನನ್ನು 'ಆನಂದ ಕವಿ' ಎಂದು ಬಣ್ಣಿಸಿಕೊಂಡು, ಕನ್ನಡದ ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರ ಕವನವೊಂದರ ಸಾಲನ್ನು 'ಇರುವುದೆಲ್ಲವ ಬಿಟ್ಟು ಇರುವೆ ಬಿಟ್ಟುಕೊಳ್ಳುವುದೇ ಜೀವನ' ಎಂದು ವಿಕೃತವಾಗಿ ಬಳಸುತ್ತಾನೆ. ಕವನದ ಮೂಲ ಸಾಲು 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ'. ಈ ಮನೋಜ್ಞ ಸಾಲಿಗೆ ಇದಕ್ಕಿಂತ ಮಿಗಿಲಾದ ಅಪಮಾನ ಬೇರೆ ಇರಲು ಸಾಧ್ಯವಿಲ್ಲ. ಇದುವರೆಗೆ ಗಾದೆಗಳನ್ನು ವಿಕೃತಗೊಳಿಸುತ್ತಿದ್ದ ಟೀವಿ ಬರಹಗಾರರು ಈಗ ಕನ್ನಡ ಕವಿಗಳ ಸಾಹಿತ್ಯವನ್ನು ಕುಲಗೆಡಿಸುವ ಧೈರ್ಯ ಮಾಡಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಇದೇ ರೀತಿಯ ವ್ಯಂಗ್ಯದಲ್ಲಿ ಸಿನಿಮಾ ಹೆಸರನ್ನೇ ಇಟ್ಟಿದ್ದಾರೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಹಳೆ ಸಿನಿಮಾಗಳಿಗೆ ಹೊಸ ವಿನ್ಯಾಸ

ಝೀ ಕನ್ನಡದ 'ಮಹಾನಟಿ' ರಿಯಾಲಿಟಿ ಶೋನ ಸ್ಪರ್ಧಿಗಳು ಅದ್ಭುತವಾಗಿ ಅಭಿನಯಿಸಿದ್ದಾರೆ. ಕಳೆದ ಸಂಚಿಕೆಯಲ್ಲಿ ಕೆಲವು ಪ್ರಮುಖ ಸಿನಿಮಾಗಳ ನಾಯಕ ನಾಯಕಿಯರ ನಟನೆಯನ್ನು ಮರುಸೃಷ್ಟಿ ಮಾಡಿದರು. ವಸ್ತ್ರ ವಿನ್ಯಾಸ ಸೊಗಸಾಗಿ ಇತ್ತು. ಕಿರುತೆರೆ ಕಲಾವಿದರ ಸಹಭಾಗಿತ್ವ ಚೆನ್ನಾಗಿತ್ತು. 'ಅಮೃತ ವರ್ಷಿಣಿ', 'ಪ್ರೇಮಲೋಕ', 'ದುನಿಯಾ', 'ರಾಜಾಹುಲಿ' ಮೊದಲಾದ ಸಿನಿಮಾಗಳು ಮತ್ತೊಮ್ಮೆ ತೆರೆಕಂಡಂತೆ ಗೋಚರಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಇದು ಬಣ್ಣದ ಒಲವಿನ ಎಡವಟ್ಟು

ಝೀ ಕನ್ನಡದ 'ಬ್ರಹ್ಮಗಂಟು'ನಲ್ಲಿ ನಾಯಕ ಚಿರುಗೆ ತನ್ನ ಪತ್ನಿಯ ಮೇಲೆ ಪ್ರೀತಿ ಮೂಡುತ್ತಿದ್ದಂತೆ ಕಪ್ಪಗಿದ್ದ ನಾಯಕಿಯ ಮೈ ಬಣ್ಣ ತಿಳಿಯಾಗಿ ಬಿಳಿ ಬಣ್ಣಕ್ಕೆ ತಿರುಗಲಾರಂಭಿಸಿದೆ. ಮೇಕಪ್ ಕೂಡ ಮಾದಕವಾಗುತ್ತಿದೆ. ಈ ರೂಪಾಂತರವು ಧಾರಾವಾಹಿಯ ಸಿದ್ಧ ಸೂತ್ರದಂತೆ ಕಾಣಿಸುತ್ತಿದೆ.

ವೀಕ್ಷಕರು ಇಂತಹ ಪ್ರಹಸನಗಳನ್ನು ನೋಡಿದ್ದರಿಂದ ಪೂರ್ವಭಾವಿಯಾಗಿ ಅಂದಾಜಿಸುತ್ತಾರೆ. ವಿಚಿತ್ರ ಏನೆಂದರೆ, ಕಪ್ಪಗಿದ್ದಾಗ ಪ್ರೀತಿಗೆ ಅರ್ಹಳಿರಲಿಲ್ಲ. ಪ್ರೀತಿ ಮೂಡುತ್ತಿದ್ದಂತೆ ಕಪ್ಪು ಮಾಸಲಾರಂಭಿಸಿದೆ. ಕಥೆಗೆ ರೋಚಕ ರಂಗು ತುಂಬುತ್ತಿದೆ. ಆದರೆ ಈ ವರ್ಣ ನೀತಿ ಜನಸಾಮಾನ್ಯರಲ್ಲಿ ತಪ್ಪು ತಿಳಿವಳಿಕೆಗೆ ಕಾರಣವಾಗುವುದೆಂಬ ಸಾಮಾಜಿಕ ಕಾಳಜಿ ಇರಬೇಕಿದೆ. ಆರಂಭದಲ್ಲಿ ಕಂಡ ಕೃಷ್ಣ ವರ್ಣವನ್ನೇ ಮುಂದುವರಿಸಬೇಕಿತ್ತು. ವಸ್ತ್ರಾಭರಣಗಳಲ್ಲಿ ಪತಿಯ ಮನೆಗೆ ತಕ್ಕಂತೆ ಆಧುನಿಕತೆ ಕಂಡುಬಂದಿದ್ದರೆ ಪಾತ್ರ ಹಾಗೂ ವಾಸ್ತವತೆಗೆ ನ್ಯಾಯ ದೊರಕುತ್ತಿತ್ತು. ವರ್ಣಭೇದಕ್ಕೂ ಅವಕಾಶವಿಲ್ಲದೆ ನ್ಯಾಯ ಸಲ್ಲಿಸಿದಂತಾಗುತ್ತಿತ್ತು.

—ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

## ಮನೆಯಲ್ಲೇ ಮದ್ಯ ಸಮಾರಾಧನೆ

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ಒಂದು ವಾರ ಪೂರ್ತಿ ನಡೆಯುವ ಸಂಸ್ಕಾರ ಕರ್ಮಗಳನ್ನು ವೈಭವೀಕರಿಸುವ ದೃಶ್ಯ ಮತ್ತು ಚಾರು ತಾಯಿ ಹಾಗೂ ಅವರ ಬಿಸಿನೆಸ್ ಪಾರ್ಟನರ್ ಮನೆಯಲ್ಲಿ ಕುಡಿಯುವ ದೃಶ್ಯಗಳ ಮೂಲಕ ಸಮಾಜಕ್ಕೆ ಯಾವ ಸಂದೇಶ ನೀಡಲು ಹೊರಟಿದ್ದಾರೆ.

—ಕೃಷ್ಣಮೂರ್ತಿ

## ಅವಮಾನ ಭೂಷಣವಲ್ಲ

ಝೀ ಕನ್ನಡದ 'ಕರ್ಣ'ದಲ್ಲಿ ಇತ್ತೀಚಿನ ಒಂದು ದೃಶ್ಯ ಕಂಡು ಪೆಚ್ಚೆನಿಸಿತು. ಇದರ ನಾಯಕನನ್ನು ಅವಮಾನಿಸಲು ಒಬ್ಬ ಹಿರಿಯ ವ್ಯಕ್ತಿ ಬಂದು ಅವರ ಕುಟುಂಬದ ಸದಸ್ಯರ ಎದುರು ಕಾಫಿ ಚೆಲ್ಲುತ್ತಾರೆ. ಅದೂ ನಾಯಕನ ಕಾಲಿನ ಮೇಲೆ, ಆತನೇ ಅದನ್ನು ಒರೆಸಿಕೊಳ್ಳುತ್ತಾನೆ. ಆ ರೀತಿ ಅವಮಾನದ ದೃಶ್ಯದಲ್ಲಿ ಕಾಣಿಸಿಕೊಂಡಿದ್ದು ಹಿರಿಯ ಕಲಾವಿದ ನಾಗಾಭರಣ ಅವರು. ಅವರಿಂದ ಇಂತಹ ನಟನೆ ಬೇಕಿರಲಿಲ್ಲ ಎಂದು ಅನ್ನಿಸಿತು.

—ಕೆ.ಎಸ್. ಸೋಮೇಶ್ವರ

## ವೀಕ್ಷಕರ ಅನುಭವಕ್ಕೂ ದಕ್ಕಬೇಕು

ಝೀ ಕನ್ನಡದ 'ಅಮೃತಧಾರೆ'ಯಲ್ಲಿ ಭೂಮಿಕಾ ವೃತ್ತಿಯಿಂದ ಶಿಕ್ಷಕಿ. ಆಕೆಯ ಪತಿ ಗೌತಮ್ ದಿವಾನ್ ದೊಡ್ಡ ಉದ್ಯಮಿ. ಅವರದು ಶ್ರೀಮಂತ ಕುಟುಂಬ. ಅವರ ದಾಂಪತ್ಯ ಹರ್ಷದಿಂದ ಕೂಡಿದೆ. ಭೂಮಿಕಾ ತಾಯ್ತನ ಖುಷಿಯಲ್ಲಿ ಇದ್ದಾಗಲೇ ಒಂದು ಮಗುವಿನ ಅಪಹರಣ ಆಗಿದೆ. ಆಕೆ ಗರ್ಭಿಣಿಯಾಗಿದ್ದಾಗ ಆಧುನಿಕ ಪರೀಕ್ಷೆ, ಚಿಕಿತ್ಸೆಯನ್ನು ನೀಡಲಾಗಿತ್ತು. ಆದರೂ ಆಕೆಯ ಗರ್ಭದಲ್ಲಿ ಅವಳಿ ಭ್ರೂಣ ಬೆಳೆಯುತ್ತಿರುವುದು ಪತ್ತೆ ಆಗಲಿಲ್ಲ. ಅಂದರೆ ದುಬಾರಿ ಸ್ಕ್ಯಾನಿಂಗ್‌ಗಳ ಬಗ್ಗೆ ಶಂಕೆಪಡಬೇಕೋ ಅಥವಾ ವೈದ್ಯರ ವಿಶ್ವಾಸಾರ್ಹತೆ ಬಗ್ಗೆ ಅನುಮಾನಪಡಬೇಕೋ ಗೊತ್ತಾಗುತ್ತಿಲ್ಲ. ಇದಕ್ಕಿಂತ ಅತಾರ್ಕಿಕ ಸಂಗತಿಯನ್ನು ದೀರ್ಘವಾಗಿ ಎಳೆಯಲು ಇಂತಹ ಸನ್ನಿವೇಶಗಳನ್ನು ಹೆಣೆಯಲಾಗುತ್ತದೆಯೋ ಗೊತ್ತಿಲ್ಲ. ಆದಷ್ಟು ಸರಳವಾಗಿ ವೀಕ್ಷಕರ ಅನುಭವಕ್ಕೆ ಬರುವಂತೆ ಕಥೆ ಸಾಗಿದರೆ ನೋಡಲು ಚಂದ.

—ವನಿತಾ, ದಾವಣಗೆರೆ

## ಹೃದಯವಂತ ವೈದ್ಯನ ವೈಭವೀಕರಣ ತಪ್ಪಲಿ

ಝೀ ಕನ್ನಡದ 'ಕರ್ಣ' ಅರ್ಥಪೂರ್ಣ ಧಾರಾವಾಹಿ. ಆಕರ್ಷಕ ಶೀರ್ಷಿಕೆಯ ಈ ಕಥೆ ವೀಕ್ಷಕರ ಮನಸೂರೆಗೊಂಡಿದೆ. ಈ ಹಿಂದೆ ವಿಷ್ಣುವರ್ಧನ್ ಅಭಿನಯದ 'ಕರ್ಣ' ಸಿನಿಮಾ ನಮ್ಮ ಮನದಲ್ಲಿ ಹಸಿರಾಗಿದೆ. ಈ ಧಾರಾವಾಹಿಯ ನಾಯಕ ಕೂಡ ಅಂತಹ ಅಂತಃಕರಣದ ವೈದ್ಯನಾಗಿದ್ದಾನೆ. ನುರಿತ ವೈದ್ಯ ಕರ್ಣನಿಗೆ ವೈಯಕ್ತಿಕ ಕೆಲಸಕ್ಕಿಂತ ತನ್ನ ವೈದ್ಯಕೀಯ ವೃತ್ತಿ ಮೊದಲ ಆದ್ಯತೆ ಎನ್ನುವುದನ್ನು ತೋರಿಸುತ್ತಾನೆ. ಅಂತಹ ಹೃದಯವಂತ ಪಾತ್ರವನ್ನು ಕೆಲವೊಮ್ಮೆ ವೈಭವೀಕರಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ ಅದು ಆಗಬಾರದು. ಸಹಜವಾಗಿ ಇರಬೇಕು.

ಮುಂದೆ ಇದೂ 'ಪುಟ್ಟಕ್ಕನ ಮಕ್ಕಳು' ರೀತಿಯಲ್ಲಿ ಸಾಗದೆ ತನ್ನ ಅರ್ಥಪೂರ್ಣ ಕಾಳಜಿಯನ್ನು ಕೊನೆಯ ತನಕ ಕಾಯ್ದುಕೊಳ್ಳಲಿ ಎನ್ನುವುದು ನಮ್ಮ ಬಯಕೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

